## ರಾಜ್ಯದಲ್ಲಿ ಇರುವ ಪಾಲಿಟೆಕ್ನಿಕ್‌ಗಳಲ್ಲಿ ಪ್ರಾಂಶುಪಾಲರ ನೇಮಕ

963 (1238) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ ಇರುವ ಒಟ್ಟು ಪಾಲಿಟೆಕ್ನಿಕ್‌ಗಳ ಸಂಖ್ಯೆ ಎಷ್ಟು;

2) ಅವುಗಳ ಪೈಕಿ ಪ್ರಾಂಶುಪಾಲರ ಹುದ್ದೆ ಖಾಲಿ ಇರುವ ಪಾಲಿಟೆಕ್ನಿಕ್‌ಗಳ ಸಂಖ್ಯೆ ಎಷ್ಟು ಮತ್ತು ಯಾವ ಯಾವ ಪಾಲಿಟೆಕ್ನಿಕ್‌ಗಳಲ್ಲಿ ಈ ಹುದ್ದೆ ಖಾಲಿ ಇವೆ;

3) ಈ ಪಾಲಿಟೆಕ್ನಿಕ್‌ಗಳಲ್ಲಿ ಈ ಹುದ್ದೆ ಎಂದಿನಿಂದ ಖಾಲಿ ಇವೆ ಮತ್ತು ಈ ಹುದ್ದೆಗಳನ್ನು ತುಂಬದಿರಲು ಕಾರಣವೇನು;

4. ಪ್ರಾಂಶುಪಾಲರಾಗಲು ಇರಬೇಕಾದ ನಿಯಮಾವಳಿಗಳೇನು;

5) ಇನ್‌ಚಾರ್ಜ್ ಪ್ರಾಂಶುಪಾಲರನ್ನಾಗಿ ಯಾವ ಯಾವ ಪಾಲಿಟೆಕ್ನಿಕ್‌ಗಳಲ್ಲಿ ನೇಮಿಸಲಾಗಿದೆ; ಪ್ರದಕ್ಕೆ ಕಾರಣಗಳೇನು ಹಾಗೂ ಸದರಿ ಪಾಲಿಟೆಕ್ನಿಕ್‌ಗಳಲ್ಲಿ ಖಾಯಂ ಪ್ರಾಂಶುಪಾಲರನ್ನು ಎಂದಿನಿಂದ ನೇಮಿಸಲಾಗುವುದು?

ಡಾ॥ ಜಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

1) 187

2) 37, ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರಾಂಶುಪಾಲರ ಹುದ್ದೆ ಖಾಲಿ ಇರುತ್ತವೆ.

3) ದಿನಾಂಕ 24-2-2002 ರ ಆದೇಶದಲ್ಲಿ ಪ್ರಾಂಶುಪಾಲರ ಹುದ್ದೆಗಳನ್ನು ಸೃಜಿಸಲಾಗಿದ್ದು ಪ್ರಾಂಶುಪಾಲರು ಗ್ರೇಡ್-1 ಹುದ್ದೆಗೆ ಪದೋನ್ನತಿಯಲ್ಲಿ ಮೀಸಲಾತಿಗೆ ಸರ್ಕಾರ ಅನುವು ಮಾಡಿದ್ದ ಆದೇಶವನ್ನು ಕೆಲವರು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಶ್ನಿಸಿದ್ದು ನ್ಯಾಯ ಮಂಡಳಿಯು ಈ ಬಗ್ಗೆ ಯಥಾಸ್ಥಿತಿ (Status quo) ಕಾಯ್ದೆಕೊಳ್ಳಲು ಆದೇಶಿಸಿರುವುದರಿಂದ ಸದರಿ ಹುದ್ದೆಗಳನ್ನು ನ್ಯಾಯಮಂಡಳಿಯ ಮಧ್ಯಂತರ ಆದೇಶ ತೆರವಾಗುವವರೆಗೆ ತುಂಬಲು ಅವಕಾಶವಿರುವುದಿಲ್ಲ

4) ಪ್ರಾಂಶುಪಾಲರ ಗ್ರೇಡ್-1 ಹುದ್ದೆಗೆ ಕನಿಷ್ಠ ಪಕ್ಷ 12 ವರ್ಷಗಳ ಸೇವೆಯನ್ನು ಪೂರೈಸಿ ಆಯ್ಕೆ ವೇತನ ಶ್ರೇಣಿ ಹೊಂದಿರಬೇಕು ಮತ್ತು ಜೇಷ್ಠತೆಯಲ್ಲಿ ಹಿರಿಯಗಾಗಿರಬೇಕು. ಪ್ರಾಂಶುಪಾಲರ ಗ್ರೇಡ್-2 ಹುದ್ದೆಗೆ ಕನಿಷ್ಠ 18 ವರ್ಷಗಳ ಸೇವೆಯನ್ನು ಪೂರೈಸಿರುವ ಆಯ್ಕೆ ಶ್ರೇಣಿ ಉಪನ್ಯಾಸಕರು ಗಳಾಗಿರಬೇಕು ಹಾಗೂ ಜೇಷ್ಠತೆಯಲ್ಲಿ ಹಿರಿಯರಾಗಿಬೇಕು.

5) ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಶೈಕ್ಷಣಿಕ ಮತ್ತು ಆಡಳಿತ ಹಿತದೃಷ್ಟಿಯಿಂದ ಪ್ರಭಾರ ಪ್ರಾಂಶುಪಾಲರಾಗಿ ನೇಮಿಸಲಾಗಿದೆ.

ನ್ಯಾಯ ಮಂಡಳಿಯ ಮಧ್ಯಯಂತರ ಆದೇಶ ತೆರವಾದ ಕೂಡಲೆ ಪದೋನ್ನತಿ ಮೂಲಕ ತುಂಬಲು ಕ್ರಮ ಜರುಗಿಸಲಾಗುವುದು.

## ಸಿ.ಇ.ಟಿ. ಘಟಕಕುರಿತು

964 (1293) ಶ್ರೀ ಹಂಪನಗೌಡ ಬಾದರ್ಲಿ (ಸಿಂಧನೂರು): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯ ಸರ್ಕಾರ ಸಿ.ಇ.ಟಿ. ಘಟಕವನ್ನು ತೆಗೆದು ಹಾಕುವ ಉದ್ದೇಶ ಹೊಂದಿದೆಯೇ; ಇದಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಆದೇಶವನ್ನು ಜಾರಿಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?